ಸಲ ಇಬ್ಬರೂ ನುಡಿಸಬೇಕಾಗುತ್ತದೆ. ಕೆಲವು ವೇಳೆ ಒಮ್ಮೆ ಗುರು ನುಡಿಸಿದ ಮೇಲೆ ಶಿಷ್ಯ ನುಡಿಸಬೇಕಾಗುತ್ತದೆ. ತಬಲಾದ ಬೋಲ್... 'ದಾ ದಾ ತಿಟ್ಟ... ದಾ ದಾ ತಿಟ್ಟ... ಎಂದಿದ್ದರೆ ಇದನ್ನು ಗುರು–ಶಿಷ್ಯರಿಬ್ಬರೂ ಒಟ್ಟಿಗೇ ನುಡಿಸಿದರೆ ಹೆಚ್ಚು ಪರಿಣಾಮಕಾರಿ. ವಿದ್ಯಾರ್ಥಿಗಳು ಎದುರು ಕುಳಿತು ನುಡಿಸಿದಷ್ಟು ಆನ್‌ಲೈನ್ ಕಲಿಕೆ ಯಶ ಸಾಧಿಸುವುದಿಲ್ಲ' ಎನ್ನುವುದು ಅವರ ಅನುಭವ.

'ತಬಲಾದಲ್ಲಿ ಹೊಸಬರಿಗೆ ಫಿಂಗರಿಂಗ್ ಟೆಕ್ನಿಕ್ಸ್ ಕಲಿಸುವುದು ಕಷ್ಟ. ಮಕ್ಕಳಿಗೆ ಅರ್ಥವಾಗುವ ರೀತಿ ಕಲಿಸಬೇಕಿದ್ದರೆ ಮುಖಾಮುಖಿಯೇ ಆಗಬೇಕು. ಜೊತೆಗೆ ಮಕ್ಕಳ ತಪ್ಪು ತಿದ್ದೋದು ಸ್ವಲ್ಪ ಕಷ್ಟ. ಸ್ಕೈಪ್ ಮೂಲಕ ಆನ್‌ಲೈನ್ ಕ್ಲಾಸ್ ಮಾಡುವಾಗ ಮುಖ್ಯವಾಗಿ ವೈಬ್ರೇಷನ್ ಸಿಗಲ್ಲ. ಮಕ್ಕಳ ಸಾಮರ್ಥ್ಯಕ್ಕನುಗುಣವಾಗಿ ಕಲಿಸಬಹುದು ಅಷ್ಟೆ ಎನ್ನುತ್ತಾರೆ ಉದಯರಾಜ್.

## ಸಿದ್ದಾಪುರದಿಂದ ಸಿಂಗಾಪುರದವರೆಗೆ

ಬಾನ್ಸುರಿ ವಾದಕ ಪ್ರಕಾಶ ಹೆಗಡೆ ಕಲ್ಲಾರೆಮನೆ ಉತ್ತರಕನ್ನಡದ ಸಿದ್ದಾಪುರದ ಹಳ್ಳಿಯೊಂದರಲ್ಲಿ ಕುಳಿತು ಬೆಂಗಳೂರು ಸೇರಿದಂತೆ ನಾಡಿನ ವಿಶ್ವದ ನಾನಾ ಭಾಗಗಳಲ್ಲಿರುವ ಶಿಷ್ಯಂದಿರಿಗೆ ಕೊಳಲು ಪಾಠ ಮಾಡುತ್ತಾರೆ. ಸಿಂಗಪುರ, ಆಸ್ಟ್ರೇಲಿಯಾ, ನಾರ್ವೆ, ಜರ್ಮನಿ, ದುಬೈ, ಅಮೆರಿಕಗಳಲ್ಲಿರುವ ಕೊಳಲಾಸಕ್ತ ವಿದ್ಯಾರ್ಥಿಗಳೂ ನೆಟ್ ಕನೆಕ್ಟ್ ಮಾಡಿಕೊಂಡು ರಾಗಾಲಾಪ ಮಾಡುತ್ತಾರೆ. ಹಾಗೆಂದು ಪ್ರಕಾಶ ಹೆಗಡೆ ಈ ಸಲ ಕೋವಿಡ್–19ರ ಭೀತಿಯಿಂದಾಗಿ ಇರುವ ನಿರ್ಬಂಧದ ಸಲುವಾಗಿ ಆನ್‌ಲೈನ್ ಪಾಠ ಆರಂಭಿಸಿದ್ದಲ್ಲ. ಇವರಿಗೆ ಆನ್‌ಲೈನ್ ಪಾಠ ಮಾಡುವ ಕಲೆ ಕರತಲಾಮಲಕ. ಕಳೆದ 8–10 ವರ್ಷಗಳಿಂದ ದೂರದೂರದ ಶಿಷ್ಯರಿಗೆ ಪ್ರಕಾಶ್ ಆನ್‌ಲೈನ್‌ನಲ್ಲೇ ಪಾಠ ಮಾಡುತ್ತಿದ್ದಾರೆ.

'ಆನ್‌ಲೈನ್ ಕ್ಲಾಸ್ ಮಾಡೋದು ಇಂದಿನ ಅನಿವಾರ್ಯತೆ. ನಿರಂತರವಾಗಿ ಕ್ಲಾಸ್ ಮಾಡದಿದ್ದರೆ ಮುಂದೆ ಮಕ್ಕಳಿಗೆ ಕಲಿಯುವುದು ಕಷ್ಟವಾಗಬಹುದು. ಹೀಗಾಗಿ ಹಳ್ಳಿಯಲ್ಲಿ ನೆಟ್‌ವರ್ಕ್ ಸಿಗದಿದ್ದರೂ ಬೆಟ್ಟದಂತಹ ಜಾಗಕ್ಕೆ ಹೋಗಿ ಟ್ರೈಪಾಡ್, ವ್ಯಾಟ್ಸ್‌ಆ್ಯಪ್ ವಿಡಿಯೊ ಕಾಲ್ ಮೂಲಕ ಕಲಿಸುತ್ತಿದ್ದೇನೆ' ಎನ್ನುತ್ತಾರೆ ಪ್ರಕಾಶ್. ಆನ್‌ಲೈನ್ ಕ್ಲಾಸ್‌ಗಳು ಶಿಷ್ಯಂದಿರೊಂದಿಗೆ ಮುಖಾಮುಖಿಯಾಗಿ ಕಲಿಸುವಷ್ಟು ಪರಿಣಾಮಕಾರಿಯಾಗಿರುವುದಿಲ್ಲ ಎಂಬ ವಾಸ್ತವವನ್ನು ಒಪ್ಪಿಕೊಳ್ಳುವ ಅವರು, 'ಇದರಿಂದ ಕಲಿಕೆಯ ನಿರಂತರತೆ ಯಾವುದೇ ಧಕ್ಕೆಯಿಲ್ಲ' ಎಂದೂ ಹೇಳುತ್ತಾರೆ.

'ಆನ್‌ಲೈನ್ ಪಾಠ ಹೊಸ ಮಕ್ಕಳಿಗಲ್ಲ. ಈ ಹಿಂದೆ ಕನಿಷ್ಠ ನಾಲ್ಕೈದು ರಾಗಗಳನ್ನು ಕಲಿತವರಿಗೆ ಮಾಡುವಂತಹದ್ದು. ಇದಕ್ಕಾಗಿ ಸಾಕಷ್ಟು ತಯಾರಿಯೂ ಮಾಡಬೇಕಾಗುತ್ತದೆ. ಮಕ್ಕಳಿಗೆ ಕಲಿಸಬೇಕಾದ ಭಾಗವನ್ನು ನೋಟ್ಸ್ ಮಾಡಿಕೊಂಡು, ವಿಡಿಯೊ ಅಥವಾ ಆಡಿಯೊ ರೆಕಾರ್ಡ್ ಮಾಡಿ ಕಳಿಸಬೇಕಾಗುತ್ತದೆ. ಇದರಿಂದ ಶೇ. 100ರಷ್ಟು ಆಗದಿದ್ದರೂ 90ರಷ್ಟು ಪ್ರಗತಿ ಸಾಧ್ಯವಾಗುತ್ತದೆ' ಎನ್ನುವುದು ಪ್ರಕಾಶ್ ಹೆಗಡೆ ಅಭಿಮತ.

## ಸ್ಕೈಪ್‌ನಲ್ಲಿ ಥಕಧಿಮಿತ

ಆನ್‌ಲೈನ್‌ನಲ್ಲಿ ಬರೀ ಸಂಗೀತ ಮಾತ್ರವಲ್ಲ, ನೃತ್ಯವನ್ನೂ ಕಲಿಸಲಾಗುತ್ತಿದೆ. ಖ್ಯಾತ ಕೂಚಿಪುಡಿ ನೃತ್ಯತಾರೆ ವೈಜಯಂತಿ ಕಾಶಿ ಅವರು ಬೆಂಗಳೂರಿನ ಹಂಪಿನಗರದಲ್ಲಿರುವ ತಮ್ಮ 'ಶಾಂಭವಿ ಸ್ಕೂಲ್ ಆಫ್ ಡಾನ್ಸ್' ವತಿಯಿಂದ ಆನ್‌ಲೈನ್ ಕ್ಲಾಸ್ ಮಾಡುತ್ತಿದ್ದಾರೆ.

'ನೃತ್ಯ ಪ್ರದರ್ಶಕ ಕಲೆ. ಇಲ್ಲಿ ಆಂಗಿಕ ಅಭಿನಯ, ಭಾವನೆಗಳ ಅಭಿವ್ಯಕ್ತಿ, ಚಲನೆ.. ಎಲ್ಲವೂ ಬಹಳ ಮುಖ್ಯ. ನೃತ್ಯದ ಜೊತೆಗೆ 'ಜತಿ'ಗಳನ್ನೂ ಹೇಳಬೇಕಾಗಿರುವುದರಿಂದ ಸಂಗೀತವೂ ಜೊತೆಜೊತೆಯಾಗಿಯೇ ಸಾಗಬೇಕು. ಇದನ್ನು ಆನ್‌ಲೈನ್‌ನಲ್ಲಿ ಕಲಿಸುವುದು ಬಹಳ ಕಷ್ಟ. ಗುರು–ಶಿಷ್ಯ ಮುಖಾಮುಖಿಯಾದರೆ ಮಾತ್ರ ನೃತ್ಯ ಕಲಿಕೆ ಯಶಸ್ವಿಯಾಗುವುದು. ಆದರೆ ಈಗ ಒದಗಿದ ಅನಿವಾರ್ಯತೆಯಿಂದಾಗಿ ಹಿರಿಯ ಶಿಷ್ಯರಿಗೆ ಮಾತ್ರ ಆನ್‌ಲೈನ್ ಕ್ಲಾಸ್‌ನಲ್ಲಿ ಹೇಳಿಕೊಡುತ್ತಿದ್ದೇನೆ' ಎನ್ನುತ್ತಾರೆ ವಿದುಷಿ ವೈಜಯಂತಿ ಕಾಶಿ.


ಪ್ರಕಾಶ್ ಹೆಗಡೆ ಕಲ್ಲಾರೆಮನೆ

## ಸಂಪಾದನೆಗೆ ಕಲ್ಲು

ಆನ್‌ಲೈನ್ ಸಂಗೀತ ಕಛೇರಿ, ಕ್ಲಾಸ್ ನಡೆಸುವುದು ಅನಿವಾರ್ಯ. ಎಷ್ಟೋ ಕಲಾವಿದರಿಗೆ ತಂತ್ರಜ್ಞಾನ ಗೊತ್ತಿರಲ್ಲ. ಅಂತಹವರು ಕೂಡ ಸ್ಕೈಪ್, ವ್ಯಾಟ್ಸ್‌ಆ್ಯಪ್ ಮೂಲಕ ವಿಡಿಯೊ ಕ್ಲಾಸ್ ಮಾಡುವ ಕಲೆ ಕರಗತ ಮಾಡಿಕೊಂಡು ಕ್ಲಾಸ್ ಮಾಡುತ್ತಿದ್ದಾರೆ. ಇದು ಹೊಟ್ಟೆಪಾಡಿನ ವಿಷಯವೂ ಹೌದು.

ಮನೆಪಾಠವನ್ನೇ ನಂಬಿ ಬದುಕು ನಡೆಸುವ ಅನೇಕ ಕಲಾವಿದರು ನಮ್ಮಲ್ಲಿದ್ದಾರೆ. ರಾಮನವಮಿಯಂಥ ಹಬ್ಬದ ಸಂದರ್ಭದಲ್ಲಿ ಅಲ್ಲೋ ಇಲ್ಲೋ ಒಂದೊಂದು ಕಛೇರಿ ನಡೆಸಿ ಗಳಿಸುವವರೂ ಕೆಲವರಿದ್ದಾರೆ. ದಿಗ್ಬಂಧನದ ಇಂದಿನ ದಿನಗಳಲ್ಲಿ ಕಾರ್ಯಕ್ರಮ, ಗುಂಪು ತರಗತಿ ಎಲ್ಲವೂ ರದ್ದಾಗಿ ಕಲಾವಿದರ ಬದುಕಿಗೂ ಭಾರೀ ಹೊಡೆತ ಬಿದ್ದಿದೆ. ಆದರೆ ಇವೆಲ್ಲವನ್ನೂ ಸಂಭಾಳಿಸಿಕೊಂಡು ಕಲಾವಿದರು ಆನ್‌ಲೈನ್ ಮೂಲಕವೇ ಪಾಠ ಮಾಡಿ 'ಉಳಿವಿಗಾಗಿ ಹೋರಾಟ' ಎಂಬ ರೀತಿಯಲ್ಲಿ ಬದುಕುತ್ತಿದ್ದಾರೆ.